ನೋಟಿಸ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಸುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟಾ.		ಷರಾ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ವೆ ಸ್ಟೇರ್ಡ್.	28- 5-1903	30	879	7	171	3	77	3	73	5	131	ಸ್ವಲ್ಪ ಹೆಚ್ಚು ಕಡಿಮೆ.

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮುಕ್ತಂ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಘಾಯಿಷ್ಮಾಗಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ತಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಚಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಕೋಲಾರ ತಾಲ್ಲೂಕು.
ಸುಗಟೂರು ಹೋಬಳಿ.
ಜೋಡಿ ಉಪ್ಪುಕುಂಟೆ—17ನೇ ಜೂನ್ 1903.
ಜೋಡಿ ಹನುಮಂತಪುರ—19ನೇ ಜೂನ್ 1903.

(ಹಚ್ಚು ತಪಶೀಲ್ ಬಗ್ಗೆ 30—4—1903ನೇ ಮುಕ್ತಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡಿಪ್ಯೂಟಿ ಕಮಿಷನರ್.

ಇಸ್ತಿಹಾರ್.

ತಾರೀಖು 17ನೇ ಏಪ್ರೆಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅ॥ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ॥ ನಂ. 78.

ಫಿರ್ಯಾದಿ. ಸರ್ಕಾರ

ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮುಕ್ತಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೊಲೀಸಿನವರಿಂದ ಹಾಜರಾಗಲ್ಪಟ್ಟಿತು.

ಈ ಮೊಕದ್ದಮಾ ವಿಚಾರಣೆ ನಡಿಸಿದ್ದರಲ್ಲಿ ಈ ಮಾಲುಗಳನ್ನು ಸದರೀ ಬೂಸಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸ್ದಾರರು ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟು ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡಿಯಬಹುದು.

ತುಮಕೂರು ಡಿ॥ 2ನೇ ಜನರಲ್ ಅ॥ ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು—ಕ್ರಿಮಿನಲ್ ಮಿಸಲೇನಿಯಸ್ ಕೇಸ್ ನಂಬರು 8 (1901—1902).